ತಾರೀಖು 2ನೇ ಮಾರ್ಚಿ 1896.

ನಂ. 7798.—ಫಾ. ಫೈ. 127—95.—1890ನೇ ಇಸವಿ ಫಿಬ್ರವರಿ 28ನೇ ಮಕ್ಕುಂ 362ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ, ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಪಡಿಸುವದೇನಂದರೆ, ಉಬ್ರಾಣಿ ಮತ್ತು ಚನ್ನಗಿರಿ ಡಿಪೋಗಳಲ್ಲಿ ಅವ್ವಲ್ ರಖಮಿನ ತೇಗದಪೋಲ್‌ಯಾನೆ ಕೂಚಗಳಿಗೆ ಚಿಲ್ಲರೆ ಮಾರಾಟದ ದರವು, 1895ನೇ ಇಸವಿ ಡಿಸೆಂಬರ್ ಗುರ್ಯೇ ತಾರೀಖು ಲಾಗಾಯತು ಅದರಡಿ ಕಂಡಂತೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಡಿಪೋಗಳ ಹೆಸರು.	ತಪ್ಯೀಲ್.	ರಖಂ.	ಚಿಲ್ಲರೆ ಮಾರಾಟ ದರ ಸಲೆ ಅಡಿ 1ಕ್ಕೆ. ಇಂದ.			ದರ ಸಲೆ ಅಡಿ 1ಕ್ಕೆ ದರ. ಗೆ.		
ಉಬ್ರಾಣಿ ..	ತೇಗದ ಕೂಚಗಳು ನಾಲ್ಕು ಸಲೆ ಅಡಿ ವರಿಗೆ ..	ಅವ್ವಲ್	0	8	0	0	10	0
	ಡಿಟೋ ನಾಲ್ಕು ಅಡಿಯೀಂದ ಎಂಟು ಅಡಿ ವರಿಗೆ ..	ಡಿಟೋ	0	10	0	0	12	0
ಚನ್ನಗಿರಿ ..	ಡಿಟೋ ಎಂಟು ಅಡಿಯಿಂದ 12 ಅಡಿ ವರಿಗೆ	ಡಿಟೋ	0	12	0	0	14	0

ತಾರೀಖು 5ನೇ ಮಾರ್ಚಿ 1896.

ನಂ. 7993.—ರೆ. 3113.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ 173ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಯಕಸನ್ಟು ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಟರ್ ವಿ. ಶ್ರೀನಿವಾಸಾಚಾರ್ಲು ಯವರಿಗೆ, 1896ನೇ ಇಸವಿ ಮಾರ್ಚಿ 9ನೇ ಮಕ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ವೊದಲು 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7899.—ರೆ. 3078.—ಶ್ರೀರಂಗಪಟ್ಟಣದ ತಾಲ್ಲೂಕು ಡಿಪ್ಯುಟಿ ಅಮಲ್ದಾರ್ ಡಿ. ಸುಬ್ಬರಾಯರು ಎ. ಕೃಷ್ಣೀಅಸನವರು ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ಯಡತೊರೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ಕಾಯಂ ವುದ್ಯೋಗಸ್ಥರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ಮೈಸೂರು ಡಿಸ್ಟ್ರಿಕ್ಟು ಆಫಿಸ್ ರೆವಿನ್ಯೂ ಹೆಡ್ ಅಕ್ಕೌಂಟೆಂಟ್ ಡಿ. ಸುಬ್ಬರಾಯರು, ಶ್ರೀರಂಗಪಟ್ಟಣದ ತಾಲ್ಲೂಕು ಡಿಪ್ಯುಟಿ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 27ನೇ ಫಿಬ್ರವರಿ 1896.

ನಂ. 7839.—ರೆ. 362.—ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಎಸ್. ಚಂದ್ರಶೇಖರಯ್ಯರವರಿಗೆ, 1895ನೇ ಇಸವಿ ಡಿಸೆಂಬರ್ 17ನೇ ಮಕ್ಕುಂ 5614 ರೆವಿನ್ಯೂ 2190ನೇ ನಂಬರು ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ 1 ತಿಂಗಳೂ 25 ದಿವಸಗಳ ಪ್ರಿವಿಲೀಜ್ ರಜಾವನ್ನ ಅವರು, 1896ನೇ ಇಸವಿ ಜನವರಿ 2ನೇ ಮಕ್ಕುಮಿನ ಮಧ್ಯಾನ್ಹಾತ್ಪರ ಉಪಯೋಗಿಸಿಕೊಂಡು, 1896ನೇ ಇಸವಿ ಫಿಬ್ರವರಿ 13ನೇ ಮಕ್ಕುಮಿನ ಪೂರ್ವಾನ್ಹದಲ್ಲಿ ಮರಳಿ ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ರಜಾ ಪೈಕಿ ವುಳಿದ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬವೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 1067. ತಾರೀಖು 5ನೇ ಮಾರ್ಚಿ 1896, ಬೆಂಗಳೂರು.

ಬೆಂಗಳೂರು ಷಹರಿನಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಧರ್ಮರಾಯ ದೇವಸ್ಥಾನಕ್ಕೆ ವೊಕರರಾಗಿರುವ ಧರ್ಮದರ್ಶಿಗಳ ಪೈಕಿ ಬಹಳ ಜೈಫಿಯಾದ ಯಜಮಾನ ಮುನಿಶಾಮಪ್ಪನವರಿಗೆ ಬದಲಾಗಿ ಆತನ ಮಗ ಅಲರಾಜಪ್ಪನ ಸುಬ್ಬಾಯಪ್ಪನವರನ್ನ ಧರ್ಮದರ್ಶಿಯಾಗಿ ನೇಮಿಸಿ ಇಧೆ.

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂ. ಅಂಡ್ ಸೆಕ್ರಟೆರಿ.